ದಾಖಲಿಸಲಾಗುತ್ತಿದೆ. ರಾಜಕಾರಣಿಗಳ ಒತ್ತಾಯದ ಮೇರೆಗೆ ಯಾವುದೇ ಮೊಕದ್ದಮೆಗಳನ್ನು ದಾಖಲಿಸಿಕೊಳ್ಳಲಾಗುತ್ತಿಲ್ಲ.

(ಊ) 2008ರಿಂದ ಇಲ್ಲಿಯವರೆಗೆ (2010 ಜೂನ್ 25ವರೆಗೆ) 1) ಚಿಕ್ಕೋಡಿ, 2) ಸದಲಗಾ, 3) ನಿಪ್ಪಾಣಿ ಗ್ರಾಮೀಣ ಮತ್ತು 4) ನಿಪ್ಪಾಣಿ ಬಸವೇಶ್ವರ ಚೌಕ ಪೊಲೀಸ್ ಠಾಣೆಗಳಲ್ಲಿ ಐಪಿಸಿ ಸೆಕ್ಷನ್ 307 ರಡಿಯಲ್ಲಿ ಮೊಕದ್ದಮೆಗಳನ್ನು ದಾಖಲಿಸಿರುವ ಪಿರ್ಯಾದುದಾರರು ಯಾರೂ ಕೊಲೆಗೀಡಾಗಿರುವುದಿಲ್ಲ.

ಅನುಬಂಧ–ಅ

ಐಪಿಸಿ ಸೆಕ್ಷನ್ 302 & 307 ರಡಿಯಲ್ಲಿ ದಾಖಲಾದ ಪ್ರಕರಣಗಳ ವಿವರ

ವರ್ಷ	ಕಲಂ 302 ಐಪಿಸಿ ಅಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ	ಕಲಂ 302 ಐಪಿಸಿ ಅಡಿಯಲ್ಲಿ ಮೊಕ್ಕದ್ದಮೆಯನ್ನು ಎಷ್ಟು ಜನರ ಮೇಲೆ ದಾಖಲಿಸಲಾಗಿದೆ	ಕಲಂ 307 ಐಪಿಸಿ ಅಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ	ಕಲಂ 307 ಅಡಿಯಲ್ಲಿ ಮೊಕ್ಕದ್ದಮೆಯನ್ನು ಎಷ್ಟು ಜನರ ಮೇಲೆ ದಾಖಲಿಸಲಾಗಿದೆ
2008	06	07	01	09
2009	03	13	04	46
2010 (25.06.10 ರವರೆಗೆ	07	27	05	37

ಪಂಡರಾಪುರದಲ್ಲಿ ಕರ್ನಾಟಕ ರಾಜ್ಯಛತ್ರ ನಿರ್ಮಾಣ

374 (235) ಶ್ರೀ ಪ್ರಕಾಶ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗಾ):–ಗೃಹ ಹಾಗೂ ಮುಜರಾಯಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕರ್ನಾಟಕ ರಾಜ್ಯದಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಶ್ರೀ ಪಾಂಡುರಂಗ ಸ್ವಾಮಿಯ ದರ್ಶನಕ್ಕಾಗಿ ಶ್ರೀ ಕ್ಷೇತ್ರ ಪಂಡರಾಪುರಕ್ಕೆ ತೆರಳುವ ಭಕ್ತಾದಿಗಳಿಗೆ ಅಲ್ಲಿ ಸೂಕ್ತ ವಸತಿ ಸೌಕರ್ಯವಿಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಈ ಭಕ್ತಾದಿಗಳ ಅನುಕೂಲಕ್ಕಾಗಿ ಮಹಾರಾಷ್ಟ್ರ ರಾಜ್ಯದ ಪಂಡರಾಪುರದಲ್ಲಿ ಕರ್ನಾಟಕ ರಾಜ್ಯ ಛತ್ರ ನಿರ್ಮಾಣ ಮಾಡಲು 2009–10ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿದ್ದ ಅನುದಾನವೆಷ್ಟು; ಈ ಸಂಬಂಧ ಈವರೆಗೆ ಸಾಧಿಸಿರುವ ಪ್ರಗತಿಯೇನು:

ಇ) ಈ ಸಂಬಂಧ ಎಷ್ಟು ಅನುದಾನವನ್ನು ಇಲ್ಲಿಯವರೆಗೆ ಬಳಕೆ ಮಾಡಲಾಗಿದೆ; ರಾಜ್ಯ ಛತ್ರ ನಿರ್ಮಾಣ ಯಾವ ಹಂತದಲ್ಲಿದೆ; ಇದು ಪೂರ್ಣಗೊಳ್ಳಲು ಎಷ್ಟು ಕಾಲಾವಕಾಶ ಬೇಕಾಗಿದೆ. (ಸಂಪೂರ್ಣ ವಿವರ ನೀಡುವುದು)?

ಡಾ॥ ವಿ.ಎಸ್. ಆಚಾರ್ಯ (ಗೃಹ ಹಾಗೂ ಮುಜರಾಯಿ ಸಚಿವರು):–

ಅ) ಹೌದು

ಆ) 2009–10ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಿರುವುದಿಲ್ಲ. ಮಹಾರಾಷ್ಟ್ರ ರಾಜ್ಯದ ಪಂಡರಾಪುರದಲ್ಲಿ ಕರ್ನಾಟಕ ರಾಜ್ಯ ಛತ್ರದ ನಿರ್ಮಾಣಕ್ಕಾಗಿ ರೂ. 1,28,52,400–00 ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ ಈ ಉದ್ದೇಶಕ್ಕಾಗಿ ರೂ. 80.00 ಲಕ್ಷಗಳನ್ನು ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಬಿಜಾಪುರರವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

ಪ್ರಸ್ತುತ ವಾಸ್ತವವಾಗಿ ಸ್ಥಳ ಪರಿವೀಕ್ಷಣೆ ಅನ್ವಯ ಈ ಕಾಮಗಾರಿಗೆ 2009–10ನೇ ಸಾಲಿನ ದರಪಟ್ಟಿಯಂತೆ ರೂ. 430–00 ಲಕ್ಷಗಳ ಪರಿಷ್ಕೃತ ಅಂದಾಜು ಪಟ್ಟಿಯನ್ನು ಮುಖ್ಯ ಇಂಜಿನಿಯರ್ ಧಾರವಾಡರವರು ಸಲ್ಲಿಸಿದ್ದು, ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ ಪರಿಶೀಲನೆಯಲ್ಲಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ

ನಗರ ಸಭೆಯ ಆಡಳಿತ ಭವನ ನಿರ್ಮಾಣ.

375 (720) ಶ್ರೀ ಪುಟ್ಟರಂಗಶೆಟ್ಟಿ. ಸಿ. (ಚಾಮರಾಜನಗರ):– ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಚಾಮರಾಜನಗರ ಪಟ್ಟಣದಲ್ಲಿ ನಗರಸಭೆಯ ಆಡಳಿತ ಭವನವನ್ನು ನಿರ್ಮಿಸಲು ಇಲ್ಲಿಯವರೆವಿಗೂ ಒದಗಿಸಲಾದ ಅನುದಾನವೆಷ್ಟು ; (ವಿವರಗಳನ್ನು ನೀಡುವುದು)

ಆ) ಈ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾದ ಹಣವೆಷ್ಟು ; (ಕಾಮಗಾರಿಯ ಇತ್ತೀಚಿನ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರ ನೀಡುವುದು)?

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು) :–

ಅ) ನಗರಸಭೆಗೆ ಬಿಡುಗಡೆಯಾಗಿದ್ದ ಎಸ್.ಎಫ್.ಸಿ. ಅನುದಾನದಲ್ಲಿ ರೂ. 60–00 ಲಕ್ಷಗಳನ್ನು ಜಿಲ್ಲಾ ಆಡಳಿತ ಭವನ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿದ್ದು, ಸದರಿ ಹಣವನ್ನು ಇಂಡಿಯನ್ ಬ್ಯಾಂಕಿನಲ್ಲಿ ಠೇವಣಿ ಇಡಲಾಗಿದೆ.